ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 156-160
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭಾರತದ ಬುಡಕಟ್ಟು ಸಮುದಾಯಗಳ ಬದುಕು ಮತ್ತು ಸವಾಲುಗಳು

**ಶ್ರೀನಿವಾಸ ಟಿ. ಕೆ**
ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಪರಶುರಾಮಪುರ, ಚಳ್ಳಕೆರೆ ತಾಲೂಕು, ಚಿತ್ರದುರ್ಗ ಜಿಲ್ಲೆ

**Abstract:**
*ಯಾವುದೇ ದೇಶ ಅಥವಾ ಪ್ರಾಂತ್ಯದಲ್ಲಿ ಆದಿ ಕಾಲದಿಂದಲೂ ವಾಸಿಸುತ್ತಿರುವ ಮೂಲ ಜನವರ್ಗಗಳನ್ನು ಸೂಚಿಸಲು ಬಳಸುವ ಪದವೇ 'ಆದಿವಾಸಿ ಅಥವಾ ಬುಡಕಟ್ಟು ಸಮುದಾಯ' ಇವರನ್ನು ಆಂಗ್ಲಭಾಷೆಯಲ್ಲಿ 'Tribes", Tribals ಎಂದು ಕರೆಯುವರು. ಭಾರತದಲ್ಲಿ 1928ರ ಸೈಮನ್ ಕಮೀಷನ್ ಮತ್ತು 1935ರ ಸ್ವಾತಂತ್ರ್ಯ ಕಾಯಿದೆಯ ಪ್ರಕಾರ ಇವರನ್ನು Scheduled Tribes or Listed Tribes ಎಂದು ಗುರುತಿಸಲಾಗಿದೆ. ಕಾನೂನಿನ ಹಿನ್ನೆಲೆಯಲ್ಲಿ ಸಂವಿಧಾನದ 342ರ ವಿಧಿ ಪ್ರಕಾರ ಭಾರತದ ರಾಷ್ಟ್ರಪತಿಯಿಂದ ಘೋಷಿಸಲ್ಪಟ್ಟು ಪಟ್ಟಿಮಾಡಿದ ಜನವರ್ಗಗಳಿಗೆ ಪರಿಶಿಷ್ಟ ಪಂಗಡ ಅಥವಾ ಬುಡಕಟ್ಟುಗಳು ಎಂದು ಶೆಡ್ಯೂಲ್ 8ರಲ್ಲಿ ಸೇರಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ ಭಾರತದ ಬುಡಕಟ್ಟು ಸಮುದಾಯಗಳ ಬದುಕು ಮತ್ತು ಸವಾಲುಗಳನ್ನು ಕುರಿತು ವಿವರಿಸಲಾಗಿದೆ.*

**Keywords:** *ಆದಿವಾಸಿ, ಬುಡಕಟ್ಟು ಸಮುದಾಯ, ಪರಿಶಿಷ್ಟ ವರ್ಗಗಳು, ಬದುಕು ಮತ್ತು ಸವಾಲುಗಳು.*

## ಪೀಠಿಕೆ

2011 ರ ಜನಗಣತಿಯಂತೆ ಭಾರತಾದ್ಯಾಂತ ಒಟ್ಟು 705 ಆದಿವಾಸಿ ಸಮೂಹಗಳನ್ನು ಪಟ್ಟಿ ಮಾಡಲಾಗಿದೆ. ಇವರನ್ನು ವನ್ಯಜಾತಿ, ಆದಿವಾಸಿ, ಮೂಲನಿವಾಸಿ, ಅರಣ್ಯವಾಸಿ ಮುಂತಾದ ಹೆಸರಿನಿಂದ ಕರೆಯುವರು. ಇವರನ್ನು ಹರ್ಬರ್ಟ್ ರಿಸ್ಲೆ ಮತ್ತು ಎಲ್ವಿನ್ ಎಬೋ ರೀಜನಲ್ಸ್ (ಮೂಲನಿವಾಸಿಗಳು), ಹಟ್ಟಾನ್ ಪ್ರಿಮೇಟಿವ್ ಟ್ರೈಬ್ಸ್, ಜಿ.ಎಸ್.ಘುರ್ರೆ ಹಿಂದುಳಿದ ಹಿಂದುಗಳು (Backward Hindus) ದಾಸ್ & ದಾಸ್ ಮುಳುಗಿದ ಜನವರ್ಗ (Submerged Humanity), ಠಕ್ಕರ್ ಬಾಪಾ ಆದಿಪ್ರಜಾ, ಐ.ಎಲ್.ಓ ದೇಶೀಯ ಜನವರ್ಗ (Indigeneous People) ಗಾಂಧೀಜಿ 'ಗಿರಿಜನ' ಹೀಗೆ ಬೇರೆ-ಬೇರೆ ಹೆಸರುಗಳಿಂದ ಕರೆದಿದ್ದಾರೆ.

## ಆದಿವಾಸಿ ಅಥವಾ ಬುಡಕಟ್ಟುಗಳ ಪರಿಚಯ

ಭಾರತದ ಇಂಪಿರೀಯಲ್ ಗೆಜೆಟ್‌ನ ಪ್ರಕಾರ ಒಂದೇ ರೀತಿಯ ಹೆಸರು, ಭಾಷೆ, ಸಂಸ್ಕೃತಿ, ನೆಲೆಯಲ್ಲಿ ವಾಸಿಸುತ್ತಿರುವ ಒಳಪಂಗಡದ ವ್ಯವಸ್ಥೆಗೆ ಬದ್ಧವಾಗಿರುವ ಕುಟುಂಬಗಳ ಸಮೂಹವೇ ಆದಿವಾಸಿ ಸಮುದಾಯವಾಗಿದೆ. ಇವರು ಒಂದು ಸಾಮಾನ್ಯ ಭೂ ಪ್ರದೇಶದಲ್ಲಿ ವಾಸಿಸುತ್ತಿದ್ದು, ವಿಶಿಷ್ಟ ಹೆಸರುಗಳಿಂದ ಗುರುತಿಸಿಕೊಂಡಿದ್ದು, ಸಾಮಾನ್ಯ

**Please cite this article as:** ಶ್ರೀನಿವಾಸ ಟಿ.ಕೆ. (2024). ಭಾರತದ ಬುಡಕಟ್ಟು ಸಮುದಾಯಗಳ ಬದುಕು ಮತ್ತು ಸವಾಲುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 156–160

ಭಾಷೆಯನ್ನಾಡುವ, ಪೂರ್ವಜರಲ್ಲಿ ನಂಬಿಕೆಯನ್ನಿಟ್ಟಿರುವ, ರಕ್ತಸಂಬಂಧಗಳ ಬಂಧುತ್ವದ ಬಾಂಧವ್ಯಕ್ಕೆ ಒಳಗಾಗಿರುವ ಮತ್ತು ಸಾಂಪ್ರಾದ್ರಾಯಿಕ ಧರ್ಮಾಚರಣೆಗಳನ್ನು ಪಾಲಿಸುತ್ತಿರುವ ಪ್ರಕೃತಿ ಸಹಜವಾಗಿ ಬದುಕನ್ನು ಕಟ್ಟಿಕೊಂಡಿರುವ ಸ್ಥಳೀಯ ರಾಜಕೀಯ ಸಮೂಹಗಳಾಗಿವೆ.

ಭಾರತಾದ್ಯಂತ 2011ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಒಟ್ಟು 10,42,81,034 ಅಂದರೆ 8.08% ಇದೆ. ಇವರಲ್ಲಿ 9,38,19,162 ಜನರು ಗ್ರಾಮೀಣ ಹಿನ್ನೆಲೆಯಲ್ಲಿ ವಾಸಿಸಿದರೆ, 1,04,61,872 ಜನರು ನಗರ ಹಿನ್ನೆಲೆಯಲ್ಲಿ ವಾಸಿಸುತ್ತಿದ್ದಾರೆ. ಇವರ ಲಿಂಗ ಪ್ರಮಾಣ 1000 ಪುರುಷರಿಗೆ 990 ಮಹಿಳೆರಿದ್ದು, ಮಧ್ಯಪ್ರದೇಶದಲ್ಲಿ ಭಿಲ್ಲರನ್ನೊಳಗೊಂಡಂತೆ 17.7% ಗಿಂತ ಹೆಚ್ಚಿನ ಬುಡಕಟ್ಟು ಜನರಿದ್ದಾರೆ. ಮೇಘಾಲಯದಲ್ಲಿ 2.5% ರಷ್ಟು ಕಡಿಮೆ ಬುಡಕಟ್ಟು ಜನರಿದ್ದಾರೆ. ಒಟ್ಟಾರೆ ಅವರ ಸಾಕ್ಷರತಾ ಪ್ರಮಾಣ 59% ಇದ್ದು, ಕರ್ನಾಟಕದಲ್ಲಿ ಎಸ್.ಟಿ. ಸಮುದಾಯವು ಬಳ್ಳಾರಿ, ರಾಯಚೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ಹಂಚಿಕೆಯಾಗಿದ್ದಾರೆ. ಇಲ್ಲಿ ಇವರ ಪ್ರಮಾಣ 6.95% ರಷ್ಟಿದೆ.

ಆದಿವಾಸಿಗಳ ಭೌಗೋಳಿಕ ಹಂಚಿಕೆ ಭಾರತಾದ್ಯಂತ ಆದಿವಾಸಿಗಳು ವಿವಿಧ ಪ್ರಮಾಣಗಳಲ್ಲಿ ಹಂಚಿಕೆಯಾಗಿದ್ದಾರೆ. ಅವರ ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಆದಿವಾಸಿಗಳ ಭೌಗೋಳಿಕ ಹಂಚಿಕೆಯನ್ನು ಮೂರು ರೀತಿಯಲ್ಲಿ ವಿಂಗಡಿಸಲಾಗಿದೆ. 1. ಉತ್ತರ ಮತ್ತು ಈಶಾನ್ಯ ವಲಯ 2. ಮಧ್ಯ ವಲಯ 3. ದಕ್ಷಿಣ ವಲಯ ಉತ್ತರ ಮತ್ತು ಈಶಾನ್ಯ ವಲಯದ ರಾಜ್ಯಗಳಾದ ಕಾಶ್ಮೀರ, ಪಂಜಾಬ್, ಹಿಮಾಚಲ ಪ್ರದೇಶ, ಉತ್ತರಪ್ರದೇಶ, ಅಸ್ಸಾಂ, ಬಿಹಾರ್ ಮುಂತಾದ ಕಡೆ ಗಾರೋ, ಖಾಸಿ, ನಾಗಾ, ಮಿರಿ, ಗುರುಂಗ, ಲಿಂಬು, ರಭಾ, ಕಚರಿ, ಅಬೋರ, ಅಕಾ, ಬಿರ್‌ಹೋರ್ ಮುಂತಾದವರು ಸರಳ ಕೃಷಿ, ಬೇಟೆ, ಅರಣ್ಯ ಬೇಸಾಯ ಮುಂತಾದ ಕಸಬುಗಳಿಂದ ತಮ್ಮ ಬದುಕು ದೂಡುತ್ತಿದ್ದಾರೆ. ಹಾಗೆಯೇ ಮಧ್ಯವಲಯದ ಪ್ರಾಂತ್ಯಗಳಾದ ಮಧ್ಯಪ್ರದೇಶ, ಒರಿಸ್ಸಾ, ಕರ್ನಾಟಕದ ಉತ್ತರಭಾಗ, ಜಾರ್ಖಂಡ್ ಮುಂತಾದ ಕಡೆ ಭಿಲ್ಲರು, ಸಂತಾಲ, ಮುಂಡಾ, ಗೊಂಡ, ಬಿರೋರ, ಭೂಮಿಜ್, ಗಡಬ, ಜುವಾಂಗ, ಕಂದ, ಹೋ, ಖಾರಿಯಾ, ಓರಾನ್, ಕೋಯಾ, ಸವರ, ಬೈಗಾ ಮುಂತಾದ ಸಮುದಾಯಗಳು ನೆಲೆಗೊಂಡಿದ್ದು ಭಿಲ್ಲರು ಮತ್ತು ಗೊಂಡರು ಅತಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಕೃಷಿ, ಅರಣ್ಯ ವಸ್ತುಗಳ ಸಂಗ್ರಹ (ಜೇನು, ಹಣ್ಣು–ಹಂಪಲು, ಮರ, ಬೀಜ, ತಟ್ಟೆ, ಬುಟ್ಟಿ, ಗೊಂಬೆ ಇತ್ಯಾದಿ) ಬೇಟೆ ಮುಂತಾದವುಗಳಿಂದ ಜೀವನ ಸಾಗಿಸುತ್ತಿದ್ದಾರೆ.

ದಕ್ಷಿಣ ವಲಯದ ಪ್ರಾಂತ್ಯಗಳಾದ ಕರ್ನಾಟಕ, ಕೇರಳ, ಆಂಧ್ರ, ತಮಿಳುನಾಡು, ಅಂಡಮಾನ್ & ನಿಕೋಬಾರ್ ದ್ವೀಪಗಳಲ್ಲಿ ಸೋಲಿಗ, ಇರುಳ, ಯರವ, ಕೊಂಡಮಾಮ, ತೋಡ, ಕೋಯ, ಬಡಗ, ಕಾಡುಕುರುಬ, ಜೇನುಕುರುಬ, ಹಕ್ಕಿಪಿಕ್ಕಿ, ಚೆಂಚು, ಝುರವಾ, ಅಂಡಮಾನಿ ಸೆಂಟೆನಲ್ಸ್, ನಿಕೋಬಾರಿ ಮುಂತಾದ ಬುಡಕಟ್ಟು ಸಮುದಾಯಗಳು ಸರಳಕೃಷಿ, ಮೀನುಗಾರಿಕೆ, ಬೇಟೆ ಮುಂತಾದ ಜೀವನೋಪಾಯಗಳನ್ನು ಅವಲಂಬಿಸಿದ್ದಾರೆ.

**ಬುಡಕಟ್ಟು ಸಮುದಾಯಗಳ ಸವಾಲುಗಳು ಅಥವಾ ಸಮಸ್ಯೆಗಳು:**

ಭಾರತದ ಪಾಚ್ರೀನ ಕಾಲದಿಂದಲೂ ಪ್ರತ್ಯೇಕವಾಗಿ ಗುರುತಿಸಿಕೊಂಡಿರುವ ಬುಡಕಟ್ಟು ಸಮುದಾಯಗಳು ವಿವಿಧ ಕಾಲಘಟ್ಟ ಗಳಲ್ಲಿ ವಿವಿಧ ರೀತಿಯ ಸಾಮಾಜ್ಯಗಳ, ಸರ್ಕಾರಗಳ ಮತ್ತು ಆಕ್ರಮಣಗಳಿಗೆ ತುತ್ತಾಗಿ ತನ್ನತನವನ್ನು ಉಳಿಸಿಕೊಳ್ಳಲು ಮತ್ತು ಮುಖ್ಯವಾಹಿನಿಗೆ ಬರಲು ಆಗದೇ ಸಂಘರ್ಷಮಯ ಸ್ಥಿತಿಯಲ್ಲಿಯೇ ಉಳಿಯುವಂತಾಗಿದೆ. ಇವರು ತಮ್ಮ ಅಸ್ತಿತ್ವ ಮತ್ತು ಅಸ್ಮಿತೆಗಾಗಿ ಇಂದಿಗೂ ಹೋರಾಡುವಂತಾಗಿದೆ. ಸರ್ಕಾರ ಅನೇಕ

ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಸಮರ್ಪಕವಾಗಿ ಇವರಿಗೆ ತಲುಪವಲ್ಲಿ ವಿಫಲವಾಗಿವೆ. ಹಾಗಾಗಿ ದಿನನಿತ್ಯ ಇವರು ಎದುರಿಸುತ್ತಿರುವ ಸವಾಲುಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ. ಮುಖ್ಯವಾಗಿ ಭೌಗೋಳಿಕ ಪ್ರತ್ಯೇಕತೆಯ ಸಮಸ್ಯೆ, ಸಾಂಸ್ಕೃತಿಕ ಸಮಸ್ಯೆ, ಸಾಮಾಜಿಕ ಸಮಸ್ಯೆ, ಆರ್ಥಿಕ ಸವಾಲುಗಳು, ರಾಜಕೀಯ ಸವಾಲುಗಳು, ಶೈಕ್ಷಣಿಕ ಸಮಸ್ಯೆ, ಆರೋಗ್ಯ ಸಮಸ್ಯೆ, ಪ್ರತ್ಯೇಕ ಪ್ರವೃತ್ತಿಯ ಸಮಸ್ಯೆ, ಗುರುತಿಸುವಿಕೆ/ಅಸ್ಮಿತೆಯ ಸವಾಲು ಇತ್ಯಾದಿ.

ಭಾರತಾದ್ಯಂತ ಬುಡಕಟ್ಟು ಸಮುದಾಯಗಳು ಹರಿದು ಹಂಚಿಹೋಗಿರುವುದರಿಂದ ಬುಡಕಟ್ಟು ಐಕ್ಯತೆಯನ್ನು ಸಾಧಿಸುವುದು ಒಂದು ದೊಡ್ಡ ಸವಾಲಾಗಿದೆ. ಬೆಟ್ಟ-ಗುಡ್ಡ, ಕಣಿವೆ-ಕಂದರ, ಕಾಡುಮೇಡು, ಎತ್ತರ-ಇಳಿಜಾರುಗಳಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡು ದುರ್ಗಮವಾಗಿ ಬದುಕು ಸಾಗಿಸುತ್ತಿದ್ದಾರೆ. ಇವರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಸಾರಿಗೆ-ಸಂಪರ್ಕವು ದುಸ್ಸಾಧ್ಯವಾಗಿದೆ. ಜೊತೆಗೆ ಪ್ರತಿಯೊಂದು ಬುಡಕಟ್ಟು ಸಮುದಾಯಗಳು ತಮ್ಮದೇ ವಿಶಿಷ್ಟ ರೀತಿ, ಶೈಲಿಯ ಸಂಸ್ಕೃತಿಯನ್ನು ಹೊಂದಿರುವುದರಿಂದ ಸಾಂಸ್ಕೃತಿಕ ಏಕತೆಯನ್ನು ಸಾಧಿಸುವುದು ಕಷ್ಟವಾಗುತ್ತಿದೆ. ಅನಕ್ಷರತೆ, ಮೂಢನಂಬಿಕೆ, ಕಂದಾಚಾರಗಳಿಗೆ ಬಲಿಯಾಗಿ ಇವರು ಕೆಲವು ಅಮಾನವೀಯ ಮತ್ತು ಆಘಾತಕ್ಕೆ ಒಳಗಾಗುವಂತಹ ಕ್ರಿಯಾವಿಧಿಗಳನ್ನು ಅನುಸರಿಸುತಾರ್ತೆ. ಇವರಿಗೆ ಆಧುನಿಕ ಶಿಕ್ಷಣ ನೀಡಿ ಇಂತಹವುಗಳ ಬಗ್ಗೆ ಜಾಗೃತಿ ಮೂಡಿಸುವುದು ದೊಡ್ಡ ಸವಾಲಾಗಿದೆ. ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದು, ಸ್ಥಳೀಯ ನಾಗರಿಕ ಬಲಾಢ್ಯರ, ಜಮೀನುದಾರರ, ಲೇವಾದೇವಿಗಾರರ ಆಮಿಷಗಳ ವಿಷವರ್ತುಲದಲ್ಲಿ ಸಿಕ್ಕಿ ಸಾಲಗಾರರಾಗಿ, ಜೀತಗಾರರಾಗಿ, ಕೂಲಿಯಾಳುಗಳಾಗಿ, ಅರಣ್ಯ ಕಳ್ಳಸಾಗಣೆದಾರರಾಗಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಸಿಲುಕುವಂತಾಗಿದೆ. 1858ರಲ್ಲಿ ಕಮಿಯೋಟಿದಂತಹ ಬುಡಕಟ್ಟು ಜೀತ ನಿಷೇಧ ಶಾಸನವನ್ನು ಇಲ್ಲಿ ಉಲ್ಲೇಖಿಸಬಹುದು. ಕ್ಯಾಥಲಿನ್ ಗಾಫ್‌ರವರು ತನ್ನ "Indian Peasent Uprisings" 1947ರ ವರದಿಯಲ್ಲಿ ಸಂತಾಲರ ಆರ್ಥಿಕ ಶೋಷಣೆ ಬಗ್ಗೆ ವಿವರಿಸಿದ್ದಾರೆ.

ಬಿಹಾರ್, ಝಾರ್ಖಂಡ್, ಪಶ್ಚಿಮ ಬಂಗಾಳ, ಆಂಧ್ರಪ್ರದೇಶಗಳಲ್ಲಿ ನಕ್ಸಲ್‌ಬಾರಿ ಹೋರಾಟಕ್ಕೆ ಮುಂಡ, ಬರಾಪೋ, ರಾಜಂಬಸ್ಸಿ ಮುಂತಾದ ಆದಿವಾಸಿಗಳನ್ನು ದುಷ್ಪ್ರೇರಣೆ ಮಾಡಿ ಬಳಸಿಕೊಂಡಿದ್ದಾರೆ. ಬ್ರಿಟಿಷರ ಕಾಲದಲ್ಲಿ ಬುಡಕಟ್ಟು ಸಮುದಾಯಗಳು ತಮ್ಮ ಅಸ್ಥಿತ್ವಕ್ಕಾಗಿ ಮಾಡಿದ ದಂಗೆಗಳಿಂದಾಗಿ ಇವರು ಕ್ರಿಮಿನಲ್ ಟ್ರೈಬ್ಸ್ ಎಂಬ ಪಟ್ಟಿಗೆ ಒಳಗಾದರು. ಸ್ವತಂತ್ರ ನಂತರ ಇವರು Ex-Criminal Tribes ಆಗಿ ಬದಲಾದರು. ಉದಾ: ಗುಜ್ಜಾರ್ಸ್, ಚಾಮರ್ಸ್, ಭೋವಾರಿಸ್, ಖಾಸಿ, ಬೋಯಾ ಇತ್ಯಾದಿ. ತಮ್ಮ ಉಳಿವಿಗಾಗಿ ಆದಿವಾಸಿಗಳು ಝಾರ್ಖಡ್, ಸಂತಾಲ, ಬೋಡೊ ಚಳುವಳಿಗಳಲ್ಲಿ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ಮಾಡಿದರು. ಜೊತೆಗೆ ಸಾಂಸ್ಕೃತಿಕವಾಗಿ ಅನೇಕ ರೀತಿಯ ಪರಕೀಯ ಒತ್ತಡಕ್ಕೆ ಸಿಲುಕಿದ್ದಾರೆ. ಶಿಕ್ಷಣ ಮತ್ತು ಪುನರ್ವಸತಿಯ ನೆಪದಲ್ಲಿ ಕ್ರೈಸ್ತ ಮಿಷನರಿಗಳು ಸಹಾಯ ಹಸ್ತ ಚಾಚುತ್ತಾ ತಮ್ಮ ಕ್ರೈಸ್ತ ಧರ್ಮವನ್ನು ಇವರ ಮೇಲೆ ಹೇರುತ್ತಿದ್ದಾರೆ. ಜೊತೆಗೆ ಹಿಂದು ಧರ್ಮಾನುಯಾಯಿ ಸಂಘ-ಸಂಸ್ಥೆಗಳು ಆದಿವಾಸಿಗಳನ್ನು ನಮ್ಮವರೆನ್ನುತ್ತಾ ಹಿಂದು ಸಂಪ್ರದಾಯ ಮತ್ತು ಸಂಸ್ಕೃತಿಗಳನ್ನು ಹೇರುತ್ತಾ ಹಿಂದು ಧರ್ಮೀಕರಣ ಮಾಡುವ ಧಾವಂತದಲ್ಲಿದ್ದಾರೆ. ಸಂಸ್ಕೃತೀಕರಣ ಪ್ರಕ್ರಿಯೆಗೆ ಒಳಗಾಗಿ ತಳಸಮುದಾಯಗಳಾದ ಆದಿವಾಸಿಗಳು ಮೇಲಿನ ಸ್ಥಾನಮಾನ ಪಡೆಯಲು ಯಾವ ಉಲ್ಲೇಖ ಸಮೂಹ, ಜಾತಿ, ವರ್ಗದಲ್ಲಿ ವಿಲೀನವಾಗಬೇಕೆಂಬ ಗೊಂದಲದಲ್ಲಿದ್ದಾರೆ.

ಒಟಾ ್ವರೆಯಾಗಿ ಇವರು ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಮತ್ತು ಒತ್ತಡ ಸಂಸ್ಕೃತಿಗಳೊಂದಿಗೆ ಬೆಸೆಯಲು ಹಾಗೂ ಆಧುನಿಕ ಸಂಸ್ಕೃತಿಯ ಪ್ರಭಾವದಿಂದ ಪಾರಾಗಲು ಸಾಂಸ್ಕೃತಿಕ ಸಂಘರ್ಷದಲ್ಲಿ ಸಿಲುಕಿರುವುದಂತೂ ಸತ್ಯ. ಸಾ ್ವತಂತ್ರ್ಯನಂತರದ ಕಾಲದಲ್ಲಿ ಈ ಸಮುದಾಯಗಳಿಗೆ ಆಹಾರ, ಆರೋಗ್ಯ, ಶಿಕ್ಷಣ, ನಿರ್ದಿಷ್ಟ ನೆಲೆ ಮುಂತಾದ ನಾಗರಿಕ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಪಂಚವಾರ್ಷಿಕ ಯೋಜನೆಗಳಂತೆ ಬಿಂಬಿಸಿ ಕಡತಗಳಿಗೆ ಸೀಮಿತಗೊಳಿಸುತ್ತಾ, ಭರವಸೆಗಳಲ್ಲಿಯೇ ದಿನ ದೂಡುತ್ತಾ ರಾಜಕೀಯ ಪಕ್ಷಗಳು ಇವರನ್ನು ಮತಬ್ಯಾಂಕ್‌ಗಳನ್ನಾಗಿ ಮಾಡಿಕೊಂಡಿವೆ. LAMPS, ITDP, TRIFED ಮೊದಲಾದವುಗಳು ಆರ್ಥಿಕ ನೆರವನ್ನು ಸ್ವಲ್ಪ ಮಟ್ಟಿಗೆ ನೀಡುತ್ತಿದ್ದು ನಿರೀಕ್ಷಿತ ಗುರಿ ತಲುಪಲಾಗುತ್ತಿಲ್ಲ. ಇವರ ಕಲ್ಯಾಣಕ್ಕಾಗಿ ಕೈಗೊಂಡಂತಹ ಪ್ರತ್ಯೇಕತೆಯ ನೀತಿ, ಸಾ ್ವಂಗೀಕರಣದ ನೀತಿ, ಏಕೀಕರಣದ ನೀತಿಗಳು ಮತ್ತು ನೆಹರುರವರ ಪಂಚಶೀಲ ತತ್ವಗಳು ಇಂದಿಗೂ ವಿಮರ್ಶಾ ಹಂತದಲ್ಲಿವೆ. ಇವರ ಅಭಿವೃದ್ಧಿಗಾಗಿ ನೇಮಿಸಿದ ಆಯೋಗ/ಸಮಿತಿಗಳಾದ ಕಾಕಾಸಾಹೇಬ್ ಕಾಲೇಲ್ಕರ್ ಸಮಿತಿ (1953–55), ಯು.ಎನ್.ಧೇಬರ್ ಸಮಿತಿ (1960–61), ವಿರೀರ್ ಎಲ್ವೀನ್ ಸಮಿತಿ (1959–60), ಹರಿಸಿಂಗ್ ಸಮಿತಿ (1965–67) ಮೊದಲಾದ ವರದಿಗಳು ಸಲ್ಲಿಕೆಯಾಗಿದ್ದರೂ ಸಮರ್ಪಕ ಅನುಷ್ಠಾನವಾಗದೇ ಮೂಲೆಗುಂಪಾಗಿವೆ.

ಸಂವಿಧಾನಾತ್ಮಕವಾಗಿ ಬುಡಕಟ್ಟು ಸಮುದಾಯಗಳ ಏಳಿಗೆಗಾಗಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹಲವಾರು ಕಲಂಗಳಲ್ಲಿ ಅವಕಾಶ ಕಲ್ಪಿಸಿದ್ದಾರೆ. ಉದಾಹರಣೆಗೆ ಕಲಂ 15 ರಿಂದ 19ರವರೆಗೆ ಸರ್ವಸಮಾನತೆಯ ಬಗ್ಗೆ ತಿಳಿಸಿದ್ದಾರೆ. ಕಲಂ 16 (4) ಮತ್ತು 320 (4) ಗಳಲ್ಲಿ ಉದ್ಯೋಗಗಳಲ್ಲಿ ಪಾತ್ರನಿಧಿತ್ವ ನೀಡಿದೆ. ಕಲಂ 330, 332, 334 ರಲ್ಲಿ ಶಾಸನಸಭೆಗಳಲ್ಲಿ ಆದಿವಾಸಿಗಳಿಗೆ ಮೀಸಲು ಸ್ಥಾನಗಳನ್ನು ನಿಗದಿಪಡಿಸಿದೆ. ಕಲಂ 275ರ ಪ್ರಕಾರ ಭಾರತದ ಸಂಚಿತ ನಿಧಿ (Consolidated Fund) ಯಿಂದ ಇವರಿಗೆ ಆರ್ಥಿಕ ನೆರವು ನೀಡಲು ಅವಕಾಶ ಕಲ್ಪಿಸಿದೆ. ಕಲಂ 164ರ ಪ್ರಕಾರ ಪ್ರತ್ಯೇಕ ಮಂತ್ರಿಗಳ ನೇಮಕಕ್ಕೆ ಅವಕಾಶ ನೀಡಿದೆ. ಕಲಂ 338ರ ಪ್ರಕಾರ ಆದಿವಾಸಿಗಳ ಯೋಗಕ್ಷೇಮ ನೋಡಿಕೊಳ್ಳಲು ರಾಷ್ಟ್ರ ಮತ್ತು ರಾಜ್ಯಮಟ್ಟದ ವಿಶೇಷಾಧಿಕಾರಿಯನ್ನು ನೇಮಕ ಮಾಡಲು ಅವಕಾಶ ನೀಡಿದೆ. ಈ ರೀತಿಯ ಅವಕಾಶಗಳನ್ನು ನೀಡಿದ್ದರೂ ಸಹ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಇವುಗಳನ್ನು ಸಮರ್ಪಕವಾಗಿ ಜಾರಿಗೆ ತರುವಲ್ಲಿ ವ್ಯವಸ್ಥೆಯು ವೈಫಲ್ಯವಾಗುತ್ತಿದೆ. ಒಟಾ ್ವರೆಯಾಗಿ ಆದಿವಾಸಿಗಳು ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳಲು ವ್ಯವಸ್ಥೆಯು ಅವರ ಪರವಾದಂತಹ ಕರ್ತೃಶಕ್ತಿಯನ್ನು ತೋರಬೇಕಾಗಿದೆ. ಆರ್ಥಿಕ, ಶೈಕ್ಷಣಿಕ, ರಾಜಕೀಯ, ಆರೋಗ್ಯ, ಉದ್ಯೋಗ, ವಸತಿ ಮುಂತಾದ ಸವಲತ್ತುಗಳನ್ನು ಗ್ರಾಮ ಮತ್ತು ನಗರವಾಸಿಗಳಿಗಿಂತ ಹೆಚ್ಚಿನ ಆದ್ಯತೆ ನೀಡಿ ಇವರಿಗೆ ಕಲ್ಪಿಸಿಕೊಡಬೇಕಾದ ಅನಿವಾರ್ಯತೆ ಇದೆ. ಇವರ ಅಭಿವೃದ್ಧಿಯಲ್ಲಿ ಕೇವಲ ಅಂಕಿಅಂಶ, ಕಡತಗಳಲ್ಲಿ ದಾಖಲಿಸಿ ತೋರದೆ, ನೈಜವಾಗಿ ಫಲಾನುಭವಿಗಳಿಗೆ ತಲುಪುವಂತಾಗಬೇಕು. ಸಂವಿಧಾನ ಮತ್ತು ಕಾನೂನುಬದ್ಧವಾಗಿ ಇವರ ಮೇಲೆ ನಡೆಯುವಂತಹ ತಾರತಮ್ಯತೆ ಮತ್ತು ಶೋಷಣೆಯನ್ನು ನಿಲ್ಲಿಸಬೇಕಾಗಿದೆ. ಪ್ರಪಂಚಾದ್ಯಂತ ಕತ್ತಲೆಯಲ್ಲಿರುವ ಈ ಸಮುದಾಯಗಳ ಬಾಳಲ್ಲಿ ಬೆಳಕು ಮೂಡಿಸಿ ಮುಖ್ಯವಾಹಿನಿಗೆ ತರುವಲ್ಲಿ ನಮ್ಮಂತಹ ನಾಗರಿಕರ ಜವಾಬ್ದಾರಿ ಹೆಚ್ಚಿದೆ.

**ಪರಾಮರ್ಶನ ಗ್ರಂಥಗಳು**


- ಕೋಸಾಂಬಿ, ಡಿ.ಡಿ. (2011). ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ : ಚಾರಿತ್ರಿಕ ರೂಪುರೇಖೆ, ಚಿಂತನ ಪುಸ್ತಕ.

- ನಾಗರಾಜು, ಟಿ. (2008). *ಸಾಮಾಜಿಕ ಚಳುವಳಿಗಳು.* ಚೇತನಾ ಬುಕ್ ಹೌಸ್.
- ಶಂಕರರಾವ್, ಸಿ.ಎನ್. (2010). *ಭಾರತೀಯ ಸಮಾಜ ಮತ್ತು ಸಾಮಾಜಿಕ ಚಿಂತನೆ.* ಜಯಭಾರತ್ ಪ್ರಕಾಶನ.
- ಶಂಕರರಾವ್, ಸಿ.ಎನ್. (2012). *ಸಾಮಾಜಿಕ ಆಂದೋಲನಗಳ ಪಕ್ಷಿನೋಟ.* ಜಯಭಾರತ್ ಪ್ರಕಾಶನ,
- 2011 ರ ಜನಗಣತಿ ವರದಿ